ಶ್ರೀ ಎಂ ಚಂದ್ರಶೇಖರ್.—ಇದರ ಅಂದಾಜು ಆಗಿದ್ದು ೧೯೭೭–೭೮ ರಲ್ಲಿ ಇದಕ್ಕೆ ಸರ್ಕಾರ ೧೯೭೯ರಲ್ಲಿ ಮಂಜೂರಾತಿ ನೀಡಿ ಲೋಕೋಪಯೋಗಿ ಇಲಾಖೆಗೆ ವಹಿಸಲಾಯಿತು. ೧೯೮೧–೮೨ ಹಾಗೂ ೧೯೮೨–೮೩ ರಲ್ಲಿ ಇದು ಪೂರ್ಣಗೊಂಡಿದೆ. ೫ ವರ್ಷಗಳ ಆಂತರದಲ್ಲಿ ಬೆಲೆಗಳು ಹೆಚ್ಚು ಆಗಿರುವ ಪ್ರಯುಕ್ತ ಇದು ಕೂಡ ಇಷ್ಟು ಹೆಚ್ಚಾಗಿದೆ ಎಂಬುದು ಗೊತ್ತಾಗುತ್ತದೆ.

ಶ್ರೀ ಎಚ್. ಗಂಗಾಧರನ್.—ಇದರಲ್ಲಿ ಪ್ಲಾನ್ ಏನೂ ಬದಲಾವಣೆ ಆಗಿಲ್ಲ. ಅದು ಅಷ್ಟೇ ಇದೆ. ಲೋಕೋಪಯೋಗಿ ಇಲಾಖೆಯವರು ಕಟ್ಟಡವನ್ನು ಕಟ್ಟಲು ೫ ವರ್ಷ ವಿಳಂಬ ಏಕೆ ಮಾಡಿದರು ? ನೀವು ಹುಡ್ಕೋದಿಂದ ಸಾಲ ತಂದು ಬಡ್ಡೀ ಕಟ್ಟುತ್ತೀರಿ. ಇದಕ್ಕೆ ಯಾರನ್ನು ಹೊಣೆ ಮಾಡುತ್ತೀರಿ? ಅಲ್ಲಿ ಕಟ್ಟಡ ಕಟ್ಟಿದ್ದಾರೆ. ಅದರೆ ಒಳಚರಂಡಿ ವ್ಯವಸ್ಥೆ ಸರಿಯಾಗಿಲ್ಲ. ಮನೆಗಳನ್ನು ತಗ್ಗು ಪ್ರದೇಶದಲ್ಲಿ ಕಟ್ಟಿರುವುದರಿಂದ ರಸ್ತೆಯ ಕೊಳಚೆ ನೀರೆಲ್ಲಾ ಮನೆಯೊಳಕ್ಕೆ ನುಗ್ಗುತ್ತಿದೆ. ಇಲ್ಲಿ ಕೆರೆ ಅಂಗಳದಲ್ಲಿ ಮನೆಗಳನ್ನು ಕಟ್ಟಿರುವ ಭೂಮಿ ಕೂಡ ಬೆರು ಪೇರು ಇದೆ. ಹಾಗೂ ಈ ಮನೆಗಳು ವಾಸಕ್ಕೆ ಆಯೋಗ್ಯವಾಗಿವೆ. ಹಾಗೂ ಇವು ಬಿದ್ದು ಹೋಗುವ ಸ್ಥಿತಿಯಲ್ಲಿ ಇವೆ. ಲೀಟಿಟ್ ಮಾಡದೇ ಇವನ್ನು ಕಟ್ಟಿದ್ದು ಏಕೆ ? ಈ ಬಗ್ಗೆ ಶೀಘ್ರ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ. ಅಲ್ಲಿ ಮನೆ ಕಟ್ಟಿರುವ ಪ್ರದೇಶ ತಗ್ಗಿನಲ್ಲಿದೆ. ಭೂಮಿ ಮಟ್ಟಕ್ಕಿಂತ ಪಾಯವನ್ನು ಸ್ವಲ್ಪ ಮೇಲ್ಮಟ್ಟಕ್ಕೆ ಹಾಕಬೇಕಾಗಿತ್ತು, ಈ ಕಟ್ಟಡ ಹಳ್ಳದಲ್ಲಿ ಇದ್ದು ಜೌಗು ಪ್ರದೇಶದಲ್ಲಿರುವುದನ್ನು ನಾನು ನೋಡಿದ್ದೇನೆ. ಇದು ೫ ವರ್ಷದ ಹಿಂದಿನ ಕೆಲಸವಾಗಿರುತ್ತದೆ. ಮುಂದೆ ಈ ಪ್ರದೇಶದಲ್ಲಿ ಏನಾದರೂ ಕಾಮಗಾರಿ ಕೆಲಸ ಆಗಬೇಕಾಗಿದ್ದರೆ ಆ ಬಗ್ಗೆ ಅಲ್ಲಿನ ವಿಶ್ವಸ್ಥ ಮಂಡಲಿಯವರು ನೋಡಿಕೊಳ್ಳುತ್ತಾರೆ. ಇಷ್ಟಲ್ಲದೇ ಮತ್ತೇನೂ ನಾನು ಹೇಳುವುದಕ್ಕೆ ಸಾಧ್ಯವಿಲ್ಲ.

ಬಂಟವಾಳ ತಾಲ್ಲೂಕಿನ ಕಾರೋಪಾಡಿ ವ್ಯವಸಾಯ ಸೇವಾ ಸಹಕಾರ

ಸಂಘದಲ್ಲಿ ಅವ್ಯವಹಾರದ ಬಗ್ಗೆ.

೨೨೮. ಶ್ರೀ ಕೆ. ರುಕ್ಮಯ್ಯ ಪೂಜಾರಿ (ವಿಠಲ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಹಕಾರ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಬಂಟವಾಳ ತಾಲ್ಲೂಕಿನ ಕರೋಪಾಡಿ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ಹಣ ದುರುಪಯೋಗ, ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

(ಆ) ದುರುಪಯೋಗವಾಗಿರುವ ಒಟ್ಟು ಹಣ ಎಷ್ಟು ಮತ್ತು ಇದಕ್ಕೆ ಜವಾಬ್ದಾರರು ಯಾರು ?

(ಇ) ತಪ್ಪಿತಸ್ಥರ ಮೇಲೆ ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

(ಅ) ಬಂದಿದೆ.

(ಆ) ರೂ. ೩,೦೯,೫೫೫—೧೨ ಪೈ. ಈ ಕೆಳಕಂಡವರು ಜವಾಬ್ದಾರರಾಗಿದ್ದಾರೆ.

೧. ಶ್ರೀ ಪಿ. ನಾರಾಯಣ ಭಟ್ ಮಾಜಿ ಕಾರ್ಯದರ್ಶಿ.

೨. ಶ್ರೀ ರಾಮಣ್ಣ ಶೆಟ್ಟಿ ಮತ್ತು ಶ್ರೀ ಉಸ್ಮಾನ ಮಾರಾಟ ಗುಮಾಸ್ತರು.

(ಇ) ೧. ಮಾಜಿ ಕಾರ್ಯದರ್ಶಿ ಹಾಗೂ ಇಬ್ಬರು ಮಾರಾಟ ಗುಮಾಸ್ತರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲು ಮಾಡಿದೆ.

೨. ಸಂಘದ ಅಧ್ಯಕ್ಷ ಶ್ರೀ ಹೆಚ್. ಶಂಕನನಾರಾಯಣ ಭಟ್ ಇವರನ್ನು ಆಡಳಿತ ಮಂಡಳಿಯ ಸದಸ್ಯತ್ವದಿಂದ ಅನರ್ಹತೆಗೊಳಿಸಲಾಗಿದೆ.

೩. ದುರುಪಯೋಗವಾಗಿರುವ ಹಣದ ಮಸೂಲಾತಿ ಸಹಕಾರಿ ಕಾಯ್ದೆ ಕಲಂ ೬೯ ಮತ್ತು ೭೦ ರೀತಿಯ ಕ್ರಮವನ್ನು ಜರುಗಿಸಲಾಗಿದೆ.

ಶ್ರೀ ಕೆ. ರುಕ್ಕಯ್ಯ ಪೂಜಾರಿ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಾಜಿ ಕಾರ್ಯದರ್ಶಿ ಹಾಗೂ ಇಬ್ಬರು ಮಾರಾಟ ಗುಮಾಸ್ತರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲು ಮಾಡಲಾಗಿದೆಯೆಂದು ಹೇಳಿದ್ದಾರೆ. ಹಾಗೂ ಸಂಘದ ಅಧ್ಯಕ್ಷ ಶ್ರೀ ಎಚ್. ಶಂಕರನಾರಾಯಣ ಭಟ್ ಅವರನ್ನು ಆಡಳಿತ ಮಂಡಳಿಯ ಸದಸ್ಯತ್ವದಿಂದ ಅನರ್ಹತೆಗೊಳಿಸಲಾಗಿದೆಯೆಂದು ಹೇಳಿದ್ದಾರೆ. ಆದರೆ ಇಲ್ಲಿ ಅವ್ಯವಹಾರ ನಡೆದಿರುವುದಕ್ಕೆ ಸಂಘದ ಅಧ್ಯಕ್ಷರಾದ ಶ್ರೀ ಶಂಕರನಾರಾಯಣ ಭಟ್ ಅವರೇ ಪೂರ್ಣ ಜವಾಬ್ದಾರರು ಎಂದು ಅಲ್ಲಿನ ಜನರು ಹೇಳುತ್ತಿದ್ದಾರೆ. ಆದರೆ ಇವರ ಮೇಲೆ ಕ್ರಮ ತೆಗೆದುಕೊಳ್ಳದೇ ಮಾಜಿ ಕಾರ್ಯದರ್ಶಿ ಹಾಗೂ ಇಬ್ಬರು ಮಾರಾಟ ಗುಮಾಸ್ತರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಿದ್ದು, ಶಂಕರನಾರಾಯಣ ಭಟ್ ಅವರನ್ನು ಆಡಳಿತ ಮಂಡಲಿಯ ಸದಸ್ಯತ್ವದಿಂದ ಅನರ್ಹಗೊಳಿಸಲಾಗಿದೆಯೆಂದು ಹೇಳಿದ್ದಾರೆ. ಆದುದರಿಂದ ಶಂಕರನಾರಾಯಣ ಭಟ್ಟರ ಮೇಲೆ ಮೊಕದ್ದಮೆ ಹೂಡುವಂಥ ಆಲೋಚನೆ ಸರ್ಕಾರಕ್ಕೆ ಇದೆಯೇ ? ಇಷ್ಟು ಅವ್ಯವಸ್ಥೆ ನಡೆದಿದ್ದರೂ ಆಡಳಿತ ಮಂಡಳಿಯನ್ನು ಏತಕ್ಕೆ ಬರಖಾಸ್ತುಗೊಳಿಸಿಲ್ಲ ?

ಶ್ರೀ ಆರ್. ಎಲ್. ಜಾಲಪ್ಪ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಸಹಕಾರ ಸಂಘಗಳಲ್ಲಿ ಇದು ಆಗಿದೆ, ಸನ್ಮಾನ್ಯ ಸದಸ್ಯರಿಗೂ ಇದು ಗೊತ್ತಿದೆ. ಸೀನಾಡಿ, ಕೋಯಂಬೂರು ಸಹಕಾರ ಸಂಘಗಳಲ್ಲಿಯೂ ಆಗಿದೆ. ಅಧ್ಯಕ್ಷರನ್ನು ನಿವೃತ್ತಿ ಮಾಡಿದರೆ ಜವಾಬ್ದಾರಿ ಮುಗಿಯುವುದಿಲ್ಲ. ಇದು ೧೯೮೧ನೇ ಇಸವಿಯಲ್ಲಿ ನಡೆದಿದೆ. ೩–೪ ಸಹಕಾರ ಸಂಘಗಳಲ್ಲಿ ನಡೆದಿರತಕ್ಕ ಅವ್ಯವಹಾರದ ಬಗ್ಗೆ ಜಿಲ್ಲಾ ಕೇಂದ್ರ ಬ್ಯಾಂಕು ಸರಿಯಾದ ಉಸ್ತುವಾರಿ ನಡೆಸಿಲ್ಲವೆಂದು ನನ್ನ ಅನಿಸಿಕೆ. ಸಹಕಾರ ಸಂಘವನ್ನು ಸೂಪರ್ ಸೀಡ್ ಮಾಡಿದರೂ, ಹೈಕೋರ್ಟಿನಿಂದ ಸ್ಟೇ ಆರ್ಡರ್ ತಂದಿದ್ದಾರೆ. ಈ ವಿಚಾರವನ್ನು ಪುನರ್ ಪರಿಶೀಲನೆ ಮಾಡಿ, ಯಾರ ಯಾರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲಾಗುವುದು. ಜೊತೆಗೆ ಜಿಲ್ಲಾ ಕೇಂದ್ರ ಬ್ಯಾಂಕ್ ಕರ್ತವ್ಯ ಲೋಪ ಮಾಡಿದ್ದರೆ ಅದನ್ನು ಕೂಡ ಪರಿಶೀಲನೆ ಮಾಡಲಾಗುವುದು.

ಬೆಂಗಳೂರಿನ ಹೊಸ ತರಗುಪೇಟೆಯಲ್ಲಿರುವ ಮಾರುಕಟ್ಟೆಯನ್ನು ಯಶವಂತಪುರಕ್ಕೆ ಸ್ಥಳಾಂತರಿಸುವುದು.

೨೭೩. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಹಕಾರ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯವರು ಹೊಸ ತರಗುಪೇಟೆಯಲ್ಲಿರುವ ಮಾರುಕಟ್ಟೆಯನ್ನು ಬೆಂಗಳೂರಿನ ಯಶವಂತಪುರದ ಮಾರುಕಟ್ಟೆ ಆವರಣಕ್ಕೆ ಸ್ಥಳಾಂತರಿಸಲು ಕೈಗೊಂಡ ಕ್ರಮಗಳೇನು ?

ಆ) ಇನ್ನು ಕೆಲ ವ್ಯಾಪಾರಿಗಳು ಹೊಸ ತರಗುಪೇಟೆಯಲ್ಲಿ ವ್ಯಾಪಾರ ನಡೆಸುತ್ತಿರುವುದು ನಿಜವೇ ?

ಇ) ಮಾರುಕಟ್ಟೆಯನ್ನು ಪೂರ್ತಿಯಾಗಿ ಸ್ಥಳಾಂತರಿಸಿ ಅಲ್ಲಿ ವ್ಯಾಪಾರ ನಡೆಸಲು ಸರ್ಕಾರದವರ ಕ್ರಮಗಳೇನು ?

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಸಚಿವರು).—

ಬೆಂಗಳೂರು ಮಾರುಕಟ್ಟೆ ಸಮಿತಿಯು ಯಶವಂತಪುರದಲ್ಲಿ ಅಂದಾಜು ೮೨ ಎಕರೆ ಭೂಮಿಯನ್ನು ಮಾರುಕಟ್ಟೆ ಪ್ರಾಂಗಣವನ್ನು ಸ್ಥಾಪಿಸುವ ಸಲುವಾಗಿ ಬೆಂಗಳೂರು ನಗರಾಭಿವೃದ್ಧಿ ಮಂಡಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಪಡೆದುಕೊಂಡು ಅಲ್ಲಿ ೬೮೫ ನಿವೇಶನಗಳನ್ನು ವಿಂಗಡಿಸಿ ಅವುಗಳಲ್ಲಿ ಈಗಾಗಲೇ ೪೫೨ ನಿವೇಶನಗಳನ್ನು ವ್ಯಾಪಾರಸ್ಥರಿಗೆ ಹಂಚಲಾಗಿದೆ. ಸಮಿತಿ ವಶದಲ್ಲಿದ್ದ ಖಾಲಿ ಪ್ರದೇಶದಲ್ಲಿ ೮೦ ತಾತ್ಕಾಲಿಕ ಶೆಡ್ಡುಗಳನ್ನು ಹಾಕಿದ್ದು ಅವನ್ನು ಕೇಳಿಕೊಂಡ ವ್ಯಾಪಾರಿಗಳಿಗೆ ಹಂಚಲಾಗಿದೆ. ಹಾಗೂ